# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು.

## ಸಂಚಾರ (ವಾಣಿಜ್ಯ) ಇಲಾಖೆ

ಸಂ. ಕರಾಸಾ/ಕೇಕ/ಸಂ/ವಾ-3/2271/1844/2019-20 ದಿನಾಂಕ: 11/12/2019.

## ಸುತ್ತೋಲೆ ಸಂಖ್ಯೆ: 1517/2019

**ವಿಷಯ:** ಮಾರ್ಗ ಬದಿಯ ಫಲಹಾರ ಮಂದಿರಗಳ ನಿಲುಗಡೆ ಶುಲ್ಕ ಪರಿಷ್ಕರಿಸಿರುವ ಕುರಿತು.

**ಉಲ್ಲೇಖ:** ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 790/2017 ದಿ: 30.10.2017.

- - -

ದೂರ ಸಂಚಾರದ ಪ್ರಯಾಣಿಕರಿಗೆ 2 ರಿಂದ 2½ ಗಂಟೆ ಪ್ರಯಾಣದ ನಂತರ, (ಅಂದರೆ ಸುಮಾರು 80 ರಿಂದ 100 ಕಿ.ಮೀ ಪ್ರಯಾಣದ ನಂತರ) ದಣಿವು/ಬಳಲಿಕೆಯನ್ನು ನಿವಾರಣೆಗೊಳಿಸಲು ಮಾರ್ಗ ಮಧ್ಯೆ 10 ರಿಂದ 15 ನಿಮಿಷಗಳ ಕಾಲ ಲಘು ವಿಶ್ರಾಂತಿ, ನೈಸರ್ಗಿಕ ಕರೆ ಮತ್ತು ಊಟೋಪಚಾರಕ್ಕಾಗಿ ಹಾಗೂ ವಾಹನಗಳನ್ನು ಅನುಕೂಲಕರ ಸ್ಥಳದಲ್ಲಿ ನಿಲ್ಲಿಸಲು ಉತ್ತಮ ಸೌಲಭ್ಯ ಹೊಂದಿರುವ ಮಾರ್ಗಬದಿಯ ಫಲಹಾರ ಮಂದಿರಗಳನ್ನು ನಿಗದಿ ಮಾಡಲಾಗುತ್ತಿದೆ. ಈ ವ್ಯವಸ್ಥೆಯಿಂದ ದೂರ ಸಂಚಾರದ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯ ನೀಡುವುದಲ್ಲದೆ, ನಿಗಮಕ್ಕೆ ಮಾರ್ಗಬದಿಯ ಫಲಹಾರ ಮಂದಿರಗಳಿಂದ ನಿಲುಗಡೆ ಶುಲ್ಕದ ರೂಪದಲ್ಲಿ ವಾಣಿಜ್ಯ ಆದಾಯ ಗಳಿಸಲಾಗುತ್ತಿದೆ.

ಮಾರ್ಗ ಬದಿಯ ಫಲಹಾರ ಮಂದಿರಗಳ ನಿಲುಗಡೆ ಶುಲ್ಕವನ್ನು ಬಹಳ ಹಿಂದೆ ನಿಗದಿಪಡಿಸಿದ್ದು, ಇದೀಗ ದರ ಪರಿಷ್ಕರಣೆ ಮಾಡುವುದು ಅವಶ್ಯವೆಂದು ಪರಿಗಣಿಸಿ, ಕೆಳಕಂಡಂತೆ ಪ್ರತಿ ವಾಹನಕ್ಕೆ ನಿಲುಗಡೆ ಶುಲ್ಕವನ್ನು ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

| ಕ್ರ. ಸಂ | ವಾಹನ ಮಾದರಿ | ಪ್ರಸ್ತುತ ದರ (₹) | ಪರಿಷ್ಕೃತ ದರ (₹) |
|---|---|---|---|
| 1 | ಸಾಮಾನ್ಯ, ವೇಗದೂತ ಮತ್ತು ತಡೆರಹಿತ ಕರ್ನಾಟಕ ಸಾರಿಗೆ ವಾಹನಗಳು. | 60/- | 75/- |
| 2 | ಕರ್ನಾಟಕ ವೈಭವ ರಾಜಹಂಸ ಮತ್ತು ನಾನ್ ಎ.ಸಿ ಸ್ಲೀಪರ್ ವಾಹನಗಳು. | 75/- | 90/- |
| 3 | ಐರಾವತ, ಐರಾವತ ಕ್ಲಬ್‌ಕ್ಲಾಸ್, ಅಂಬಾರಿ ಡ್ರೀಮ್ ಕ್ಲಾಸ್, ಅಂಬಾರಿ ಎ.ಸಿ ಸ್ಲೀಪರ್ ಮತ್ತು ಇತರೆ ಪ್ರತಿಷ್ಠಿತ ಸಾರಿಗೆಗಳು. (ಎಲ್ಲಾ ಹವಾ ನಿಯಂತ್ರಿತ ಸಾರಿಗೆಗಳು) | 100/- | 120/- |

ಈ ಸುತ್ತೋಲೆಯು ದಿನಾಂಕ **01.01.2020** ರಿಂದ ಜಾರಿಗೆ ಬರುತ್ತದೆ. ಉಲ್ಲೇಖದಲ್ಲಿನ ಸಾಮಾನ್ಯ ಸ್ಥಾಯಿ ಆದೇಶದಲ್ಲಿ ದರ ಪರಿಷ್ಕರಣೆ ಹೊರತುಪಡಿಸಿ, ಇನ್ನುಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ. ದರಗಳ ಪರಿಷ್ಕರಣೆ ಸಂಬಂಧ ಹೋಟೆಲ್ ಮಾಲೀಕರಿಗೆ ಸೂಚನಾ ಪತ್ರಗಳನ್ನು ನೀಡಿ ದಿನಾಂಕ 01.01.2020 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ದರಗಳನ್ನು ಪಾವತಿಸಿಕೊಳ್ಳಲು ಅಗತ್ಯ ಕ್ರಮ ತೆಗೆದುಕೊಳ್ಳಲು ತಿಳಿಸಲಾಗಿದೆ.

ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ನೀಡುವುದು ಹಾಗೂ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

**ವ್ಯವಸ್ಥಾಪಕ ನಿರ್ದೇಶಕರು,**
ಕ.ರಾ.ರ.ಸಾ.ನಿಗಮ.

**ಪ್ರತಿಯನ್ನು:**

1) ವ್ಯವಸ್ಥಾಪಕ ನಿರ್ದೇಶಕರು, ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಹುಬ್ಬಳ್ಳಿ / ಕಲಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಮುಖ್ಯ ಸಂಚಾರ ವ್ಯವಸ್ಥಾಪಕರು, ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಹುಬ್ಬಳ್ಳಿ / ಕಲಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ/ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.

N.M
Janardhan